ಶ್ರೀ ಕೆ.ಹೆಚ್. ರಂಗನಾಥ್ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ)

(ರೂ. ಲಕ್ಷಗಳಲ್ಲಿ)

ಸೋಮವಾರಪೇಟೆ ತಾಲ್ಲೂಕು	216.88	229.94	112.58
ವಿರಾಜಪೇಟೆ ತಾಲ್ಲೂಕು	45.02	69.43	148.65
ಮಡಿಕೇರಿ ತಾಲ್ಲೂಕು	-	-	-
ಒಟ್ಟು	**261.90**	**299.37**	**261.33**

ಆ)

ಡಿಪೋ	ವರ್ಷ (ಹರಾಜಾದ ಮರಗಳ ಮೊತ್ತ)		(ಲಕ್ಷ ರೂ.ಗಳಲ್ಲಿ)
	1999-00	2000-01	2001-02
ಹುಣಸೂರು	2868,911-00	39,41,721-00	1,34,72,780-00
ಕುಶಾಲನಗರ	2,16,88,101-00	2,29,94,180-00	1,12,57,993-00

ಇ) 1999-2000 - ರೂ. 68.32 ಲಕ್ಷಗಳು
2000-2001 - ರೂ. 69.70 ಲಕ್ಷಗಳು
2001-2002 - ರೂ. 86.41 ಲಕ್ಷಗಳು

ಈ) ಕೊಡಗು ಜಿಲ್ಲೆ - ರೂ. 9.28 ಲಕ್ಷಗಳು
ಮೈಸೂರು ಜಿಲ್ಲೆ - ರೂ. 1.00 ಲಕ್ಷಗಳು
ಚಾಮರಾಜನಗರ ಜಿಲ್ಲೆ - ರೂ. 5.00 ಲಕ್ಷಗಳು

ಉ) ಸೋಮವಾರಪೇಟೆ ತಾಲ್ಲೂಕು ಹೋಬಳಿ ಕುಮಾರಹಳ್ಳಿ ಗ್ರಾಮದ ಸರ್ವೆ ನಂ. 1/9ರ ದೊಡ್ಡ ಬೆಟ್ಟ ಪ್ರದೇಶದಲ್ಲಿ ನೆಡುತೋಪು ಬೆಳೆಸುವ ಸಲುವಾಗ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಮಾಜಿಕ ಅರಣ್ಯ ವಿಭಾಗ ಮಡಿಕೇರಿ, ಇವರು ಎಸ್.ಜಿ.ಆರ್.ವೈ. ಯೋಜನೆಯಡಿಯಲ್ಲಿ ರೂ. 30.00 ಲಕ್ಷ ಅನುದಾನ ಕೋರಿ ಅವರ ಪತ್ರ ಸಂಖ್ಯೆ ಬಿಜಿಟಿ/ಸಿಆರ್-6/2002-03, ದಿನಾಂಕ: 29-7-2002ರಲ್ಲಿ ಯೋಜನಾಧಿಕಾರಿ, ಕೊಡಗು ಜಿಲ್ಲಾ ಪಂಚಾಯತ್, ಮಡಿಕೇರಿ, ಇವರಿಗೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಬಗ್ಗೆ ಕ್ರಿಯಾ ಯೋಜನೆ ಅಂಗೀಕಾರಗೊಂಡಿದ್ದು, ಅನುದಾನ ಬಿಡುಗಡೆಯಾಗಿರುವುದಿಲ್ಲ.

ಕೆ.ಆರ್.ಡಿ.ಸಿ. ವತಿಯಿಂದ ರಸ್ತೆ ಡಾಂಬರೀಕರಣಕ್ಕೆ ಹಣ ಬಿಡುಗಡೆ

29 (209) ಶ್ರೀ ಅಪ್ಪಚ್ಚು ರಂಜನ್ ಎಂ.ಪಿ. (ಸೋಮವಾರಪೇಟೆ) ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೆ.ಆರ್.ಡಿ.ಸಿ.ಯಿಂದ ಕೊಡಗಿನ ರಸ್ತೆ ಅಭಿವೃದ್ಧಿಗೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ;

ಆ) 6 ಕೋಟಿ ರೂ. ಗಳು ಮಂಜೂರಾಗಿರುವುದು ನಿಜವೇ; ಹಾಗಿದ್ದಲ್ಲಿ, ಈವರೆವಿಗೂ ರಸ್ತೆಗಳ ಡಾಂಬರೀಕರಣವಾಗದೇ ಇರಲು ಕಾರಣವೇನು;

ಇ) ಕೊಡಗು ಜಿಲ್ಲೆಯಲ್ಲಿ ಒಟ್ಟು ಎಷ್ಟು ಕಿ.ಮೀ. ರಸ್ತೆ ಕೆ.ಆರ್.ಡಿ.ಸಿ. ವ್ಯಾಪ್ತಿಯಲ್ಲಿ ಬರುತ್ತದೆ; (ತಾಲ್ಲೂಕುವಾರು ವಿವರ ನೀಡುವುದು)?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಕೆ.ಆರ್.ಡಿ.ಸಿ.ಎಲ್. ಮತಿಯಿಂದ ರೂ. 3.96 ಕೋಟಿ ಮೊತ್ತದಲ್ಲಿ ರಾಜ್ಯ ಹೆದ್ದಾರಿಗಳ ಮೂರು ವರ್ಷಗಳ ನಿರ್ವಹಣೆಯನ್ನು ಕೊಡಗು ಜಿಲ್ಲೆಯಲ್ಲಿ ಮಾಡಲಾಗುತ್ತಿದೆ.

ಆ) ನಿಜವಲ್ಲ.

ರಾಜ್ಯ ಹೆದ್ದಾರಿಯ ನಿರ್ವಹಣೆಯ ಮೊತ್ತವು ರೂ. 3.96 ಕೋಟಿಗಳು. ಈ ಜಿಲ್ಲೆಯ ರಾಜ್ಯ ಹೆದ್ದಾರಿಗಳ ಭೂಮಿಯ ಸಿ.ಬಿ.ಆರ್.ನ ಪ್ರಮಾಣವು ಶೇ. 6 ಕ್ಕಿಂತ ಕಡಿಮೆ ಇರುವ ಮರುಡಾಂಬರೀಕರಣವನ್ನು ತೆಗೆದುಕೊಂಡಿರುವುದಿಲ್ಲ.

ಇ) ರಾಜ್ಯ ಹೆದ್ದಾರಿಯ ಮೂರು ವರ್ಷಗಳ ನಿರ್ವಹಣೆಯ ಅಡಿಯಲ್ಲಿ ಕೊಡಗು ಜಿಲ್ಲೆಯಲ್ಲಿ ತೆಗೆದುಕೊಂಡ ರಸ್ತೆಯ ಒಟ್ಟು ಉದ್ದ 310.84 ಕಿಮೀ. ತಾಲ್ಲೂಕುವಾರು ವಿವರ ಈ ಕೆಳಗಿನಂತಿರುತ್ತದೆ.

ಸೋಮವಾರಪೇಟೆ	-	111.00 ಕಿಮೀ.
ವಿರಾಜಪೇಟೆ	-	127.24 ಕಿಮೀ.
ಮಡಿಕೇರಿ	-	72.60. ಕಿಮೀ.
ಒಟ್ಟು	-	**310.84** ಕಿಮೀ.

ಕೃಷ್ಣರಾಜಸಾಗರದ ಬೃಂದಾವನ ಉದ್ಯಾನವನದ ನವೀಕರಣ

31 (146) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷ್ಣರಾಜಸಾಗರದಲ್ಲಿ ಬೃಂದಾವನ ಉದ್ಯಾನವನವು, ವ್ಯವಸ್ಥಿತ ನಿರ್ವಹಣೆ ಇಲ್ಲದೇ ಸಂಬಂಧಪಟ್ಟವರ ನಿರ್ಲಕ್ಷ್ಯದಿಂದಾಗಿ ಹಿಂದಿನ ಆಕರ್ಷಣೆಯನ್ನು ಮತ್ತು ಜನಪ್ರಿಯತೆಯನ್ನು ಕಳೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಇದರ ನವೀಕರಣಗೊಳಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು? (ವಿವರ ಒದಗಿಸುವುದು)

ಇ) ಈ ಯೋಜನೆಗಳು ಯಾವಾಗ ಕಾರ್ಯರೂಪಕ್ಕೆ ಬರುತ್ತದೆ?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು):

ಅ) ಹೌದು.

ಆ) ಬೃಂದಾವನವನ್ನು ಅಭಿವೃದ್ಧಿಪಡಿಸಲು ಬಿ.ಓ.ಟಿ. ಆಧಾರದ ಮೇಲೆ ನೀಡಲು ಖಾಸಗೀಯವರು ಟೆಂಡರ್‌ಗಳನ್ನು ಆಹ್ವಾನಿಸಿದ್ದು, ಅದನ್ನು ಪರಿಶೀಲಿಸಲಾಗುತ್ತಿದೆ.

ಇ) ಒಳ್ಳೆಯ ಬೇಡಿಕೆದಾರರನ್ನು ಆಯ್ಕೆ ಮಾಡಿದ ನಂತರ.

ತಿರುಮಲದ ಅತಿಥಿ ಗೃಹಗಳಲ್ಲಿ ಮೂಲಭೂತ ಸೌಕರ್ಯದ ಕೊರತೆ

32 (153) ಶ್ರೀ ಆತ್ಮಾನಂದ ಎಂ.ಎಸ್. (ಮಂಡ್ಯ) ಮಾನ್ಯ ಮುಜರಾಯಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?